## ಅಮೆರಿಕದ ಕತೆಗಾರ್ತಿ ಕ್ಯಾಥರಿನ್ ಆನ್ ಪೋರ್ಟರ್ ಸಂದರ್ಶನ

# ಕಥನ ಕಲೆಯೆಂಬ ಅಸಲಿ ಕಸುಬು

ಸಂದರ್ಶನ: **ಬಾರ್ಬರಾ ಥಾಮ್ಸನ್**
ಕನ್ನಡಕ್ಕೆ: **ಹೇಮಾ ಎಸ್.**
ಕಲೆ: ಗುರು ನಾವಳ್ಳಿ

ಅಲೆಮಾರಿ ಚೇತನದಂತೆ ಬದುಕಿದ ಕ್ಯಾಥರಿನ ಆನ್ ಪೋರ್ಟರ್ (1890–1980) ಅಮೆರಿಕದ ಕತೆಗಾರ್ತಿ, ಪತ್ರಕರ್ತೆ, ಪ್ರಬಂಧಕಾರ್ತಿ. ಕತೆಗಾರ್ತಿಯಾಗಿ ಹೆಚ್ಚು ಪ್ರಸಿದ್ಧಳಾದ ಆನ್ ಪೋರ್ಟರ್ ತನ್ನ ಕೃತಿಗಳಲ್ಲಿ ಮನುಷ್ಯನಾಳದಲ್ಲಿರುವ ಕೆಡುಕು, ವಂಚನೆ ಮತ್ತು ಸಾವಿನ ಕುರಿತು ಶೋಧಿಸುತ್ತಾಳೆ.

Flowering Judas and Other Stories, Pale Horse, Pale Rider, The Leaning Tower and Other Stories, The Old Order: Stories of the South ಕಥಾಸಂಕಲನಗಳು, Ship of Fools ಕಾದಂಬರಿ. ಇದಲ್ಲದೆ ವಿಮರ್ಶಾ ಲೇಖನ, ಪುಸ್ತಕ ಪರಿಚಯ ಮತ್ತು ಪ್ರಬಂಧಗಳನ್ನು ಬರೆದಿದ್ದಾಳೆ. ಪುಲಿಟ್ಜರ್ ಪ್ರಶಸ್ತಿ, ನ್ಯಾಷನಲ್ ಬುಕ್ ಅವಾರ್ಡ್, ಅಮೆರಿಕನ್ ಅಕಾಡೆಮಿ ಆಫ್ ಆರ್ಟ್ಸ್ ಅಂಡ್ ಲೆಟರ್ಸ್‌ನವರ ಚಿನ್ನದ ಪದಕ ಈಕೆಗೆ ಲಭಿಸಿದೆ.

ಪಿ. ಲಂಕೇಶರು ಈಕೆಯ 'Maria conception' ಕತೆಯ ಸಂಗ್ರಹಾನುವಾದ ಮಾಡಿದ್ದಾರೆ. ಅದು ಲಂಕೇಶರ 'ಉಲ್ಲಂಘನೆ ಮತ್ತು ಇತರ ಕತೆಗಳು' ಸಂಕಲನದಲ್ಲಿ ಪ್ರಕಟಗೊಂಡಿದೆ. ಇದು 'ದ ಪ್ಯಾರಿಸ್ ರಿವ್ಯೂ' ಪತ್ರಿಕೆಯಲ್ಲಿ 1963ರಲ್ಲಿ ಪ್ರಕಟವಾಗಿದ್ದ ಸಂದರ್ಶನದ ಆಯ್ದ ಭಾಗ.

◆ ಬರವಣಿಗೆಯನ್ನು ನಿಮ್ಮ ವೃತ್ತಿಯಾಗಿಸಿಕೊಳ್ಳಲು ಎಂದೂ ಬಯಸಿರಲಿಲ್ಲ ಅಂತ ಹೇಳಿದಿರಿ.

ಆ ರೀತಿ ಯಾವುದನ್ನೂ ನನ್ನ ವೃತ್ತಿ ಅಂದುಕೊಳ್ಳಲೇ ಇಲ್ಲ. ಬರವಣಿಗೆಯನ್ನು ಕೂಡ ಅಷ್ಟೇ. ಈ ಪ್ರಪಂಚದಲ್ಲಿ ಇದನ್ನು ಬಿಟ್ಟರೆ ಏನೂ ಇಲ್ಲವೇನೋ ಅನ್ನೋ ತೀವ್ರತೆಯಿಂದ ಮಾಡಲೇಬೇಕೆಂಬ ತುಡಿತದಿಂದ ಶುರುಮಾಡಿದೆ. ಯಾಕೆ ಮಾಡಬೇಕೆಂದುಕೊಂಡೆನೋ ಗೊತ್ತಿಲ್ಲ. ಆದರೆ, ನನ್ನ ಮತ್ತು ನನ್ನ ಬರವಣಿಗೆಯ ಬಂಧ ಬಹಳ ಗಾಢವಾದದ್ದು. ಆರೋ ಏಳೋ ವರ್ಷದವಳಾಗಿದ್ದಾಗಲೇ ಬರೆಯಲು ಶುರುಮಾಡಿದ್ದೆ. ಡ್ಯಾನ್ಸ್ ಮಾಡಬೇಕು, ಪಿಯಾನೋ ಕಲಿಯಬೇಕು, ಹಾಡಬೇಕು,